# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಬಿ.ಕೆ ಹರಿಪ್ರಸಾದ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 339**

**ಉತ್ತರಿಸಬೇಕಾದ ದಿನಾಂಕ : 14.09.2021**

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ರೈತರು ಸಹಕಾರ ಸಂಘಗಳಿಂದ ಪಡೆದ ಸಾಲವನ್ನು ರಾಜ್ಯ ಸರ್ಕಾರ 2020–21 ಹಾಗೂ 2021–22ರ ಸಾಲಿನಲ್ಲಿ ಮನ್ನಾ ಮಾಡಿದೆಯೇ; (ಸಂಪೂರ್ಣ ಮಾಹಿತಿ ಒದಗಿಸುವುದು) | ರೈತರು ಸಹಕಾರ ಸಂಘಗಳಿಂದ ಪಡೆದ ಸಾಲವನ್ನು ಸರ್ಕಾರ 2020–21 ಹಾಗೂ 2021–22ನೇ ಸಾಲಿನಲ್ಲಿ ಮನ್ನಾ ಮಾಡುವ ಯೋಜನೆಯನ್ನು ಘೋಷಿಸಿರುವುದಿಲ್ಲ. ಆದರೆ, 2018–19 ನೇ ಸಾಲಿನಲ್ಲಿ ರೈತರು ಸಹಕಾರ ಸಂಘಗಳಿಂದ ಬೆಳೆ ಸಾಲ ಪಡೆದು ದಿ:10.07.2018 ಕ್ಕೆ ಹೊರಬಾಕಿ ಹೊಂದಿದ ಸಾಲದ ಪೈಕಿ ಪ್ರತಿ ಕುಟುಂಬಕ್ಕೆ ರೂ.1.00 ಲಕ್ಷಗಳ ವರೆಗೆ ಸಾಲ ಮನ್ನಾ ಮಾಡಿ ದಿನಾಂಕ:14.08.2018 ರಂದು ಆದೇಶ ಮಾಡಿದ್ದು, ಈ ಯೋಜನೆ ಅನುಷಾನಕ್ಕಾಗಿ 2020–21ನೇ ಸಾಲಿನ ಆಯವ್ಯಯದಲ್ಲಿ ರೂ.260.41 ಕೋಟಿಗಳ ಆಯವ್ಯಯ ಅವಕಾಶ ಕಲ್ಪಿಸಿ ಇದರೊಂದಿಗೆ ಅಪೆಕ್ಸ್ ಬ್ಯಾಂಕಿನಲ್ಲಿ ಗಳಿಸಿದ ಬಡ್ಡಿ ಆದಾಯ ರೂ.23.78 ಕೋಟಿ, ಸಹಕಾರ ಸಂಘಗಳು ವಾಪಸ್ ನೀಡಿದ ಮೊತ್ತ ರೂ.10.95 ಕೋಟಿ ಒಟ್ಟು ರೂ.295.14 ಕೋಟಿಗಳ ಪೂರ್ಣ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. |
| ಆ | ರೈತರ ಸಾಲ ಮನ್ನಾ ಮಾಡಲು ಇರುವ ಯೋಜನೆಯ ಮಾನದಂಡಗಳೇನು; (ಸಂಪೂರ್ಣ ವಿಸ್ತೃತ ಮಾಹಿತಿ ಒದಗಿಸುವುದು) | ಸಹಕಾರ ಸಂಘಗಳ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿನ ಮಾನದಂಡಗಳು ಈ ಕೆಳಗಿನಂತಿರುತ್ತವೆ.<br>1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಡಿಸಿಸಿ ಬ್ಯಾಂಕುಗಳು, ಪಿಕಾರ್ಡ್ ಬ್ಯಾಂಕುಗಳು ಹಾಗೂ ಲ್ಯಾಂಪ್ಸ್‌ಗಳಲ್ಲಿ ರೈತರು ದಿ:10.07.2018ಕ್ಕೆ ಬೆಳೆ ಸಾಲ ಹೊರಬಾಕಿ ಹೊಂದಿರಬೇಕು.<br>2. ಬೆಳೆ ಸಾಲದಲ್ಲಿ ಒಂದು ಕುಟುಂಬಕ್ಕೆ ಗರಿಷ್ಟ ರೂ.1.00 ಲಕ್ಷದವರೆಗೆ ಸಾಲ ಮನ್ನಾ ಆಗುತ್ತದೆ.<br>3. ಈ ಯೋಜನೆ ಕೆಳಕಂಡವರಿಗೆ ಅನ್ವಯವಾಗುವುದಿಲ್ಲ.<br>• ರೂ.20,000/–ಕ್ಕಿಂತ ಹೆಚ್ಚಿನ ವೇತನ/ಪಿಂಚಣಿ ಪಡೆಯುವ ಸರ್ಕಾರಿ, ಸಹಕಾರ ಮತ್ತು ಇತರೆ ಕ್ಷೇತ್ರದ ನೌಕರರು;<br>• ಕಳೆದ ಮೂರು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಆದಾಯ ತೆರಿಗೆ ಪಾವತಿಸಿದವರಿಗೆ;<br>4. ದಿ.10.07.2018 ಕ್ಕೆ ಹೊರಬಾಕಿ ಚಾಲ್ತಿ ಇದ್ದಲ್ಲಿ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ಗಡುವಿನ ದಿನಾಂಕದೊಳಗೆ ಮರುಪಾವತಿಸತಕ್ಕದ್ದು. |

| | | |
|---|---|---|
| | | 5. ಬೆಳೆ ಸಾಲದ ಹೊರಬಾಕಿ ಸುಸ್ತಿ ಇದ್ದಲ್ಲಿ ಮರುಪಾವತಿ ದಿನಾಂಕದವರೆಗಿನ ಸಂಪೂರ್ಣ ಬಡ್ಡಿಯನ್ನು ಹಾಗೂ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ದಿ:31.07.2019 ರೊಳಗೆ ಪಾವತಿಸತಕ್ಕದ್ದು.<br>6. ಎರಡು ಸಹಕಾರ ಸಂಘಗಳಲ್ಲಿ ಸಾಲ ಪಡೆದಿದ್ದಲ್ಲಿ ಒಂದು ಸಹಕಾರ ಸಂಘದಲ್ಲಿ ಮಾತ್ರ ಸಾಲ ಮನ್ನಾ ದೊರೆಯುವುದು. |
| ಇ | ಯಾವ ಯಾವ ಸಹಕಾರಿ ಸಂಘ ಹಾಗೂ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಮನ್ನಾ ಮಾಡಲಾಗಿದೆ; | ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಡಿಸಿಸಿ ಬ್ಯಾಂಕುಗಳು, ಪಿಕಾರ್ಡ್ ಬ್ಯಾಂಕುಗಳು ಹಾಗೂ ಲ್ಯಾಂಪ್ಸ್ ಗಳಲ್ಲಿ ಪಡೆದ ಬೆಳೆ ಸಾಲವನ್ನು ಮನ್ನಾ ಮಾಡಲಾಗಿದೆ. |
| ಈ | ಸದರಿ ಯೋಜನೆಯ ಫಲಾನುಭವಿಗಳ ಒಟ್ಟು ಸಂಖ್ಯೆ ಎಷ್ಟು; ಹಾಗೂ ಸಾಲ ಮನ್ನಾ ಮಾಡಲಾಗಿರುವ ಮೊತ್ತ ಎಷ್ಟು?(ಜಿಲ್ಲಾವಾರು ಮಾಹಿತಿ ನೀಡುವುದು) | ಸದರಿ ಯೋಜನೆಯಲ್ಲಿ ಇದುವರೆಗೆ 17,06,049 ಫಲಾನುಭವಿಗಳಿಗೆ ರೂ.7987.47 ಕೋಟಿಗಳ ಬೆಳೆ ಸಾಲ ಮನ್ನಾ ಮಾಡಿ ಅನುದಾನ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ಮಾಹಿತಿ **ಅನುಬಂಧದಲ್ಲಿ** ನೀಡಲಾಗಿದೆ. |

**ಸಂಖ್ಯೆ: ಸಿಒ 249 ಸಿಎಲ್‌ಎಸ್ 2021**

**(ಎಸ್.ಟಿ ಸೋಮಶೇಖರ್)**
ಸಹಕಾರ ಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಬಿ.ಕೆ ಹರಿಪ್ರಸಾದ್ ( ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 339 ಕ್ಕೆ ಅನುಬಂಧ

**2018-19 ನೇ ಸಾಲಿನ ರೂ. 1 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ಅನುದಾನ ಬಿಡುಗಡೆ ಮಾಡಿದ ಮತ್ತು ಅನುದಾನ ಬಿಡುಗಡೆ ಮಾಡಲು ಬಾಕಿ ಇರುವ ಮೊತ್ತದ ವಿವರ** (ರೂ ಕೋಟಿ)

| ಕ್ರ. ಸಂ | ಜಿಲ್ಲೆಯ ಹೆಸರು | ಅರ್ಹತೆ ಗುರುತಿಸಿ ಅನುದಾನ ಬಿಡುಗಡೆ ಮಾಡಿರುವ ವಿವರ | | ಅರ್ಹತೆ ಗುರುತಿಸಿ ಅನುದಾನ ಬಿಡುಗಡೆ ಮಾಡಲು ಬಾಕಿ ಇರುವ ವಿವರ | | ಒಟ್ಟು ಸಾಲ ಮನ್ನಾ ಮೊತ್ತ | |
|---|---|---|---|---|---|---|---|
| | | ರೈತರ ಸಂಖ್ಯೆ | ಮೊತ್ತ | ರೈತರ ಸಂಖ್ಯೆ | ಮೊತ್ತ | ರೈತರ ಸಂಖ್ಯೆ | ಮೊತ್ತ |
| 1 | ಬಾಗಲಕೋಟೆ | 129856 | 695.21 | 2041 | 11.55 | 131897 | 706.76 |
| 2 | ಬೆಂಗಳೂರು ಗ್ರಾ. | 16830 | 79.02 | 63 | 0.36 | 16893 | 79.39 |
| 3 | ಬೆಂಗಳೂರು ನಗರ | 7695 | 39.29 | 50 | 0.38 | 7745 | 39.67 |
| 4 | ಬೆಳಗಾವಿ | 265690 | 1050.08 | 2668 | 14.38 | 268358 | 1064.46 |
| 5 | ಬಳ್ಳಾರಿ | 62797 | 365.30 | 963 | 7.28 | 63760 | 372.59 |
| 6 | ಬೀದರ್ | 101882 | 422.31 | 1512 | 7.88 | 103394 | 430.19 |
| 7 | ವಿಜಯಪುರ | 148831 | 611.82 | 2345 | 11.63 | 151176 | 623.45 |
| 8 | ಚಾಮರಾಜನಗರ | 16421 | 100.54 | 253 | 1.85 | 16674 | 102.39 |
| 9 | ಚಿಕ್ಕಬಳ್ಳಾಪುರ | 11113 | 86.74 | 40 | 0.35 | 11153 | 87.09 |
| 10 | ಚಿಕ್ಕಮಗಳೂರು | 26192 | 171.63 | 222 | 1.62 | 26414 | 173.24 |
| 11 | ಚಿತ್ರದುರ್ಗ | 34909 | 159.49 | 154 | 0.77 | 35063 | 160.25 |
| 12 | ದಕ್ಷಿಣ ಕನ್ನಡ | 58380 | 432.81 | 947 | 7.89 | 59327 | 440.70 |
| 13 | ದಾವಣಗೆರೆ | 60457 | 206.34 | 811 | 3.79 | 61268 | 210.13 |
| 14 | ಧಾರವಾಡ | 13743 | 56.98 | 69 | 0.45 | 13812 | 57.43 |
| 15 | ಗದಗ | 16055 | 62.29 | 119 | 0.56 | 16174 | 62.86 |
| 16 | ಕಲಬುರಗಿ | 41043 | 112.46 | 1676 | 5.66 | 42719 | 118.12 |
| 17 | ಹಾಸನ | 114019 | 470.16 | 904 | 3.94 | 114923 | 474.10 |
| 18 | ಹಾವೇರಿ | 20852 | 67.33 | 114 | 0.48 | 20966 | 67.81 |
| 19 | ಕೊಡಗು | 27995 | 218.23 | 300 | 2.36 | 28295 | 220.59 |
| 20 | ಕೋಲಾರ | 9783 | 87.45 | 147 | 1.44 | 9930 | 88.90 |
| 21 | ಕೊಪ್ಪಳ | 22313 | 93.25 | 176 | 0.88 | 22489 | 94.13 |
| 22 | ಮಂಡ್ಯ | 105945 | 492.95 | 1243 | 6.92 | 107188 | 499.86 |
| 23 | ಮೈಸೂರು | 49430 | 326.33 | 860 | 6.29 | 50290 | 332.61 |
| 24 | ರಾಯಚೂರು | 47600 | 223.32 | 744 | 5.31 | 48344 | 228.63 |
| 25 | ರಾಮನಗರ | 36358 | 167.12 | 334 | 1.63 | 36692 | 168.76 |
| 26 | ಶಿವಮೊಗ್ಗ | 31416 | 127.59 | 315 | 1.65 | 31731 | 129.24 |
| 27 | ತುಮಕೂರು | 116401 | 411.98 | 1548 | 6.34 | 117949 | 418.32 |
| 28 | ಉಡುಪಿ | 21149 | 145.44 | 368 | 2.86 | 21517 | 148.30 |
| 29 | ಉತ್ತರ ಕನ್ನಡ | 79146 | 477.44 | 409 | 2.66 | 79555 | 480.11 |
| 30 | ಯಾದಗಿರಿ | 11748 | 26.59 | 462 | 1.27 | 12210 | 27.85 |
| | ಒಟ್ಟು | 1706049 | 7987.474 | 21857 | 120.43 | 1727906 | 8107.91 |

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)

Received